ಸಂಖ್ಯೆ: ಆರ್‌ಡಿ 439 ಎಲ್‌ಜಿಎಕ್ಸ್ 2007

## ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:10.11.2008.

### ಸುತ್ತೋಲೆ

ವಿಷಯ: ರಿಟ್ ಅರ್ಜಿ ಸಂಖ್ಯೆ:13312/2008ಕ್ಕೆ ಸಂಬಂಧಿಸಿದಂತೆ ರಾಜ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ಕುರಿತು.

********

ರಿಟ್ ಅರ್ಜಿ ಸಂಖ್ಯೆ:13312/2008ಕ್ಕೆ ಸಂಬಂಧಿಸಿದಂತೆ ಸರ್ಕಾರಿ ವಕೀಲರಿಂದ ಬಂದ ಪತ್ರದ ದಿ:25.10.2008ರ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಹಲವಾರು ಮಂದಿ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ Karnataka Minor Minerals Concession Rules 1994 ಅನ್ನು ಉಲ್ಲಂಘಿಸಿರುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕಂದಾಯ ಇಲಾಖೆಗೆ ಮನವಿಗಳನ್ನು ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ರಿಟ್ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಗಣಿ ಭೂ ಮಾಲೀಕರಿಂದ ರಾತ್ರಿ ಮತ್ತು ಹಗಲೆನ್ನದೇ ಅವ್ಯಾಹತವಾಗಿ ಕರ್ಕಶ ಶಬ್ದದ ಅಕ್ರಮ ಕಲ್ಲು ಸಿಡಿಯುವಿಕೆ ಚಟುವಟಿಕೆಗಳು ನಡೆಯುತ್ತಿರುವುದರಿಂದ ಆ ಪ್ರದೇಶದಲ್ಲಿ ವಾಸಿಸುತ್ತಿರುವ ಹಳ್ಳಿಗರಿಗೆ ಅಲ್ಲಿ ವಾಸಿಸಲು ತೊಂದರೆಯಾಗಿರುವುದಾಗಿ ಹಾಗೂ ಅವರುಗಳ ಮನೆ ಮತ್ತು ಬೆಳೆಗಳಿಗೆ ತೀವ್ರ ತೊಂದರೆ ಆಗಿರುವುದಾಗಿ ಸದರಿ ರಿಟ್ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಅಲ್ಲದೇ ಕಲ್ಲು ಸಿಡಿಯುವಿಕೆಯಿಂದ ಕಲ್ಲಿನ ತುಂಡುಗಳು ಹಾರಾಡಿಕೊಂಡು ಮೇಲಿನಿಂದ ಬೀಳುವುದರಿಂದ ಹಳ್ಳಿಗರ ಜೀವಕ್ಕೆ ಭಯವಿರುವುದಾಗಿ ತಿಳಿಸಿರುತ್ತಾರೆ.

ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಮತ್ತೊಮ್ಮೆ ಇಂತಹ ರಿಟ್ ಅರ್ಜಿಯು ವಿಚಾರಣೆಗೆ ಬಂದಲ್ಲಿ ನ್ಯಾಯಾಲಯ ನಿಂದನಾ ಕ್ರಮ ಕೈಗೊಳ್ಳುವುದಲ್ಲದೇ ಅನುಮತಿ ನೀಡಿದ ಸಂಬಂಧಿಸಿದ ಲೈಸೆನ್ಸಿಂಗ್ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳಿಗೆ ತಲಾ ರೂ.20,000/- ದಂಡ ವಿಧಿಸುವ ಕಠಿಣ ಕ್ರಮ ಕೈಗೊಳ್ಳುವುದಾಗಿ ಆದೇಶಿಸಿರುತ್ತಾರೆ. ಆದ್ದರಿಂದ ಇಂತಹ ಮನವಿಗಳು ಸ್ಥೀಕರಿಸಿದ್ದಲ್ಲಿ ಹಾಗೂ ಬಾಕಿ ಇದ್ದಲ್ಲಿ ಅವುಗಳ ಬಗ್ಗೆ ಕೂಡಲೇ ನಿಯಮಾವಳಿಯಂತೆ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

(ಜಿ. ತಂಗರಾಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

ಇವರಿಗೆ,
1) ಎಲ್ಲಾ ಪ್ರಾದೇಶಿಕ ಆಯುಕ್ತರು.
2) ಎಲ್ಲಾ ಜಿಲ್ಲಾಧಿಕಾರಿಗಳು.
3) ಹೆಚ್ಚುವರಿ ಪ್ರತಿ / ಶಾಖೆಯ ರಕ್ಷಾ ಕಡತ.